# ಕಲಾವಿದನ ಕೈಚಳಕ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಬೇಳೂರು ಉದಯಸಿಂಹ ಅವರ ಕೈಚಳಕದಲ್ಲಿ ಮೂಡಿಬಂದ ಕಲಾಕೃತಿಯಿದು. ಅವರ 'ಸಿಂಹ ಫಾರ್ಮ್‌ಹೌಸ್'ನಲ್ಲಿ ಎಮ್ಮೆ, ಕಾಡುಕೋಣ, ಹುಲಿ, ಜಿಂಕೆ, ಗನ್ ಹಿಡಿದು ನಿಂತಿರುವ ಪೊಲೀಸ್, ಗಿಡಗಳಿಗೆ ನೀರು ಹನಿಸುತ್ತಿರುವ ತೋಟದಾಳು ಮೊದಲಾದ ಕಲಾಕೃತಿಗಳನ್ನು ನೋಡಬಹುದು. ಸಾಮಾನ್ಯವಾಗಿ ಕೊಲ್ಲೂರು, ಕೊಡಚಾದ್ರಿಗೆ ಹೋಗುವ ಪ್ರವಾಸಿಗರು ಇವರ ಫಾರ್ಮ್‌ಹೌಸ್‌ನಲ್ಲಿ ತಂಗಿ ಅಲ್ಲಿರುವ ಕಲಾಕೃತಿಗಳನ್ನು ವೀಕ್ಷಿಸಿ ಸಂತಸಪಟ್ಟು ನಂತರ ತಮ್ಮ ಪಯಣ ಮುಂದುವರಿಸುತ್ತಾರೆ.

**-ಚಂಪಾ ರಾಘವೇಂದ್ರ,**
**ಚಿಕ್ಕಮಗಳೂರು**





# ಬೆಂಡಿನ ಬಾಸಿಂಗ

ಇವು ಮದುವೆಯಲ್ಲಿ ಮದುಮಕ್ಕಳಿಗೆ ತೊಡಿಸುವ ಬಾಸಿಂಗಗಳು. ಉತ್ತರ ಕರ್ನಾಟಕದ ಮದುವೆಯಲ್ಲಿ ಈ ಬಾಸಿಂಗಗಳು ವಿಶಿಷ್ಟ ಮಹತ್ವವನ್ನು ಪಡೆದಿವೆ. ಮದುಮಗನಿಗೆ ದಡೀ, ದೋತರ, ನೆಹರುಶರ್ಟ್, ಹಳದಿ ರುಮಾಲು ಅದರ ಮೇಲೆ ಈ ಬೆಂಡಿನಿಂದ ಮಾಡಿದ ಬಾಸಿಂಗಗಳು. ಈ ಎಲ್ಲ ವೇಷಭೂಷಣಗಳಿಂದ ಮದುಮಗನ ಕಳೆ ಬರುತ್ತದೆ. ಅದರಂತೆ ಮದುಮಗಳಿಗೂ ಬೆಂಡಿನ ದಂಡೆಯನ್ನು ಮಾಡಿ ಕಟ್ಟುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಬೆಂಡಿನ ಬಾಸಿಂಗಗಳು ಅಪರೂಪವಾಗುತ್ತಿವೆ. ಅವುಗಳನ್ನು ತಯಾರಿಸುವ ಕುಟುಂಬಗಳೂ ಅಪರೂಪ.

**-ಕೆ.ಪಿ. ರಾಮುಗುಂಡಿ, ಬೈಲಹೊಂಗಲ**

# ಗೋಡೆವಾಡೆಗಳು

ಹಿಂದಿನ ಕಾಲದಲ್ಲಿ ಜನರು ತಮ್ಮ ದವಸ–ಧಾನ್ಯಗಳನ್ನು ಸಂರಕ್ಷಿಸಲು ನೆಲದ ಒಳಗೆ ಹಗೇವು ವ್ಯವಸ್ಥೆಗಳನ್ನು ಮಾಡಿಕೊಂಡಿದ್ದರೆ, ನೆಲದ ಮೇಲೆ ಧಾನ್ಯ ಸಂಗ್ರಹಣೆಗೆ ಗೆರಸೆ, ವಾಡೆ, ಪಣತ, ಕಣಜಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈ ಚಿತ್ರದಲ್ಲಿರುವ 'ಗೋಡೆವಾಡೆ'ಗಳು ಕಾಳು ಸಂಗ್ರಹ ವ್ಯವಸ್ಥೆಗಳು. ಈ ವಾಡೆಗಳನ್ನು ಮಣ್ಣಿನಿಂದ ಮಾಡಿ, ಆವಿಗೆಯಲ್ಲಿ ಸುಟ್ಟು ಕಲ್ಲಿನ ಗೋಡೆಗಳಲ್ಲಿ ಸಾಲು ಸಾಲಾಗಿ ಅಂತರ ಬಿಟ್ಟು ಜೋಡಿಸಿ, ಹೊರಗೆ ಕಾಣದಂತೆ ಮಣ್ಣಿನಿಂದ (ಕೆಸರು) ಮುಚ್ಚಿದರೆ, ವಾಡೆಗಳೆಲ್ಲಿ ಗೋಡೆಯಂತೆ ಕಾಣುತ್ತಿದ್ದವು. ಸಿಲಿಂಡರಿನಂತೆ ಕಾಣುವ ಇವುಗಳ ಮೇಲ್ಭಾಗದಲ್ಲಿ ಕಾಳನ್ನು ಸುರುವಲು ಬಾಯಿ, ತಳದಲ್ಲಿ ತೆಗೆಯಲು ಕಿರು ರಂಧ್ರವಿರುತ್ತದೆ. ರಂಧ್ರ ಮುಚ್ಚಿ, ಕಾಳುಹಾಕಿ ಬಾಯಿಯನ್ನು ಸೆಗಣಿ ಮಣ್ಣಿನಿಂದ ಮುಚ್ಚಿದರೆ ಎರಡು–ಮೂರು ವರ್ಷಗಳ ತನಕವೂ ಸುರಕ್ಷಿತವಾಗಿರುತ್ತಿದ್ದವು. ಇವು ನಮ್ಮೂರಿನ ಹಳೆಯ ಮನೆಯ ಗೋಡೆಯಲ್ಲಿವೆ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

